**ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ**
**ಜೇವರ್ಗಿ**

**ಸಿಸಿ ನಂ.661/2021**

**ಚಾಸಾ-3/ಪಿಡಬ್ಲೂ-2**

| | |
|---|---|
| **ಹೆಸರು** | ಮಹಾಂತಗೌಡ |
| **ತಂದೆ ಹೆಸರು** | ಶಿವಲಿಂಗಪ್ಪಗೌಡ |
| **ವಯಸ್ಸು** | 40 ವರ್ಷಗಳು |
| **ಉದ್ಯೋಗ** | ಒಕ್ಕಲುತನ |
| **ವಾಸ ಸ್ಥಳ** | ಬಿರಾಳ ಹಿಸ್ಸಾ |

**ದಿನಾಂಕ 21.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭೀಯೋಜಕರಿಂದಃ**

ಚಾಸಾ-1, 2 ನನಗೆ ಗೊತ್ತು. ಆರೋಪಿ ಗೊತ್ತು. ಈಗ ನಾನು ಒಂದು ದಾಖಲೆ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 2 ವರ್ಷಗಳ ಹಿಂದೆ ಬಿರಾಳ ಹಿಸ್ಸಾ ಗ್ರಾಮದ ಚಾಸಾ-1 ರವರಿಗೆ ಸೇರಿದ ಸರ್ವೆ ನಂ.47 ರಲ್ಲಿ ಜಗಳದ ವಿಚಾರವಾಗಿ ಮಾಡಿರುತ್ತೇನೆ. ಚಾಸಾ-1 ರವರು ಗುನ್ನೆ ಜಾಗವನ್ನು ಪೊಲೀಸರಿಗೆ ತೋರಿಸಿದ್ದು ಪಂಚನಾಮೆಯನ್ನು ಮಧ್ಯಾಹ್ನ 3.30 ರಿಂದ 4.00 ಗಂಟೆವರೆಗೆ ಮಾಡಿರುತ್ತಾರೆ. ಪಂಚನಾಮೆಯಲ್ಲಿ ಬರೆದ ವಿಚಾರಗಳು ಪೋಲಿಸರು ನನಗೆ ಓದಿ ಹೇಳಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀ ಸವಾಲಿಗೆ ಸ.ಸ.ಅರವರು ಅನುಮತಿಯುನ್ನ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

**ವಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕ 22.02.2022 ರಂದು ಸಾಯಂಕಾಲ 4.30 ರಿಂದ 5.30 ಗಂಟೆಯವರೆಗೆ ನನ್ನ ಹಾಗೂ ಚಾಸಾ-2 ರವರ ಸಮಕ್ಷಮ ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ಪೋಲಿಸರು ಒಂದು ತಾಸು ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆ ಮಾಡಲು ಪೋಲಿಸರೆ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ. ಚಾಸಾ-1 ರವರ ಹೊಲದ ಪಹಣಿಯನ್ನು ನಾನು ನೋಡಿಲ್ಲ. ಪಂಚನಾಮೆಯಲ್ಲಿ ಬರೆದ ವಿಚಾರಗಳು ಪೋಲಿಸರು ನನಗೆ ಓದಿ ಹೇಳಿಲ್ಲ. ನಾನು ಮತ್ತು ಚಾಸಾ-1 ಒಂದೆ ಗ್ರಾಮದವರು ಎಂದರೆ ಸರಿ. ಚಾಸಾ-1 ರವರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೆ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ

**<u>ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ</u>**
**<u>ಜೇವರ್ಗಿ</u>**

**<u>ಸಿಸಿ ನಂ.661/201</u>**

**<u>ಚಾಸಾ-4/ಪಿಡಬ್ಲೂ-3</u>**

| | |
|---|---|
| **ಹೆಸರು** | ಚಂದ್ರಭಾಗಮ್ಮ |
| **ಗಂಡನ ಹೆಸರು** | ಮಲ್ಲಿಕಾರ್ಜುನ |
| **ವಯಸ್ಸು** | 28 ವರ್ಷ |
| **ಉದ್ಯೋಗ** | ಒಕ್ಕಲುತನ |
| **ವಾಸ ಸ್ಥಳ** | ಬಿರಾಳ ಹಿಸ್ಸಾ |

**<u>ದಿನಾಂಕ 22.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭೀಯೋಜಕರಿಂದ:</u>**

ಚಾಸಾ-1 ನನ್ನ ತಾಯಿ, ಚಾಸಾ-5 ನನ್ನ ಅಜ್ಜ. ಆರೋಪಿಗಳು ನನಗೆ ಗೊತ್ತು.

ನನ್ನ ತಾಯಿಗೆ ನನ್ನ ತಂದೆ ಬಿರಾಳ ಹಿಸ್ಸಾ ಗ್ರಾಮದಲ್ಲಿ ಸರ್ವೆ ನಂ.47 ರಲ್ಲಿ 02-ಎಕರೆ ನನ್ನ ತಾಯಿಯ ಹೆಸರಿಗೆ ಮಾಡಿರುತ್ತಾನೆ. ಆರೋಪಿತರಿಗೆ ನನ್ನ ತಂದೆ 04-ಎಕರೆ ಜಮೀನು ಮಾರಿದ್ದು ಉಳಿದ 02-ಎಕರೆ ಜಮೀನು ಸಹ ಸಾಗುವಳಿ ಮಾಡುತ್ತಿದ್ದಾರೆ. ಸದರಿ 02-ಎಕರೆ ಜಮೀನು ನನಗೆ ಮತ್ತು ನನ್ನ ತಾಯಿಗೆ ಸೇರಿದ್ದು ಇರುತ್ತದೆ.

ದಿನಾಂಕ 16.02.2022 ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಚಾಸಾ-1 ರವರು ಹೊಲಕ್ಕೆ ಹೋದಾಗ 1 ಮತ್ತು 2ನೆ ಆರೋಪಿತರು ನನ್ನ ಗಳೆ ಹೊಡೆಯುತ್ತಿದ್ದರು. ಆಗ ಚಾಸಾ-1 ರವರು ಗಳೆ ಹೊಡೆಯಬೇಡ ಎಂದು 2ನೆ ಆರೋಪಿಗೆ ಕೇಳಿದಾಗ ಚಾಸಾ-1 ರವರಿಗೆ ಮಾನಕ್ಕೆ ಕುಂದು ಬರುವ ಹಾಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. 1ನೆ ಆರೋಪಿ ಚಾಸಾ-1 ರವರಿಗೆ ತಳ್ಳಿ ಹೊಡೆದಿರುತ್ತಾಳೆ. 2ನೆ ಆರೋಪಿ ಚಾಸಾ-1 ರವರಿಗೆ ಕೊಡಲಿ ಬಡಿಗೆಯಿಂದ ಹೊಡೆದು ಖಲಾಸ ಮಾಡುತ್ತೇವೆ ಎಂದು ಜೀವ ಬೆದರಿಕೆ ಹಾಕಿರುತ್ತಾರೆ. ಆನಂತರ ಅದೆ ದಿನ ಚಾಸಾ-1 ರವರು ಪೊಲೀಸ ಠಾಣೆಗೆ ಹೋಗಿ ಆರೋಪಿತರ ವಿರುದ್ದ ದೂರು ದಾಖಲಿಸಿರುತ್ತೇನೆ. ದಿನಾಂಕ 20.02.2022 ರಂದು ಘಟನೆ ಕುರಿತು ಬಿರಾಳ ಹಿಸ್ಸಾ ಗ್ರಾಮದಲ್ಲಿ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀ ಸವಾಲಿಗೆ ಸ.ಸ.ಅರವರು ಅನುಮತಿಯುನ್ನ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

**<u>ವಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

ಆರೋಪಿತರು ನಮ್ಮ ಹೊಲದಲ್ಲಿ ಅತಿಕ್ರಮ ಪ್ರವೇಶ ಮಾಡಿರುತ್ತಾರೆ ಎಂದರೆ ನಿಜ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

1ನೆ ಆರೋಪಿಯನ್ನು ನಾನು ನೋಡಿರುತ್ತೇನೆ. ಅವರನ್ನು ನೋಡಿ 03-ವರ್ಷಗಳಾಗಿರುತ್ತದೆ. 2004 ರಲ್ಲಿ ಆರೋಪಿತರು ನನ್ನ ತಂದೆಯಿಂದ ಜಮೀನು ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ಆಗ ನಾನು ಚಿಕ್ಕವಳಿದ್ದೆ ಎಂದು ಹೇಳುತ್ತಾರೆ. 1ನೆ ಆರೋಪಿತಳು 2015 ರಿಂದ 2023 ರವರೆಗೆ ಮೊಳಕಾಲು ನೋವಿನಿಂದ ಬಳಲುತ್ತಿದ್ದು ನಡೆಯಲು ಆಗುವುದಿಲ್ಲ ಎಂದರೆ ಸರಿಯಲ್ಲ. 2022 ರಲ್ಲಿ 1ನೆ ಆರೋಪಿತಳು ಮೊಳಕಾಲು ಆಪರೇಶನ ಮಾಡಿಕೊಂಡಿರುತ್ತಾಳೆ ಎಂದರೆ ಸರಿಯಲ್ಲ. 2022 ರಿಂದ ಇಲ್ಲಿಯವರೆಗೆ 1ನೆ ಆರೋಪಿತಳು ಮೊಳಕಾಲಿಗೆ ಸಂಬಂಧಿಸಿದ ಪಿಜಿಯೋ ಥೆರಪಿ ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ಸರಿ. 1ನೆ ಆರೋಪಿತಳು ಆಗಾಗ ಚಿಕಿತ್ಸೆ ಪಡೆಯುತ್ತಾ ಬಂದಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ.

ಹೊಲದ ವಿಚಾರವಾಗಿ 1ನೆ ಆರೋಪಿತಳು ಹೊಲದ ವಿಚಾರವಾಗಿ ಜಮೀನಿನ ವಿಚಾರವಾಗಿ ನನ್ನ ತಂದೆ-ತಾಯಿ ವಿರುದ್ದ ಇದೆ ನ್ಯಾಯಾಲಯದಲ್ಲಿ ದಾವೆ ನಂ.123/2021 ಸಲ್ಲಿಸಿರುತ್ತಾರೆ ಎಂದರೆ ಸರಿ. ನನ್ನ ತಂದೆ ಹಾಗೂ ತಾಯಿಯ ನಡುವೆ ಜೀವನಾಂಶದ ಪ್ರಕರಣವಿದೆ ಎಂದರೆ ಸರಿ. ನನ್ನ ತಂದೆ-ತಾಯಿ ನಡುವೆ ಸಂಬಂಧ ಸರಿ ಇಲ್ಲ ಎಂದರೆ ಸರಿ. ಜಗಳವು ಸರ್ವೆ ನಂ.47 ರಲ್ಲಿ ಆಗಿರುತ್ತದೆ. ಸರ್ವೆ ನಂ.47 ರಲ್ಲಿ ಎಷ್ಟು ಹಿಸ್ಸೆಗಳಿವೆ ಎಂದು ನನಗೆ ಗೊತ್ತಿಲ್ಲ. 1ನೆ ಆರೋಪಿತಳ ಗಂಡ ಹಾಗೂ ನಮ್ಮ ನಡುವೆ ಸಂಬಂಧ ಸರಿ ಇಲ್ಲ ಎಂದರೆ ಸರಿ. ಈ ಪ್ರಕರಣ ದಾಖಲಾಗುವ ಮುಂಚೆ ಸಿವಿಲ್ ದಾವೆ ಚಾಲ್ತಿಯಲ್ಲಿತ್ತು ಎಂದರೆ ಸರಿ. 2ನೆ ಆರೋಪಿ 1ನೆ ಆರೋಪಿತಳು ಹೊಲವನ್ನು ಪಾಲಿನಂತೆ ಮಾಡಿರುತ್ತಾರೆ ಎಂದರೆ ಸರಿ.

1ನೆ ಆರೋಪಿತಳಿಗೆ ನಡೆದಾಡಲು ಬರದ ಕಾರಣ ಜಗಳವಾದ ಸ್ಥಳದಲ್ಲಿ ಬಂದಿಲ್ಲ ಮತ್ತು ಜಗಳವಾಗಿಲ್ಲ ಮತ್ತು ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. 2ನೆ ಆರೋಪಿ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಅವರ ಮಾನಕ್ಕೆ ಕುಂದು ತಂದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಿವಿಲ್ ದಾವೆಯನ್ನು ಹಿಂಪಡೆಸಬೇಕೆಂದು ಚಾಸಾ-1 ರವರು ಆರೋಪಿತರ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-1 ರವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ

<u>**ದಿನಾಂಕ 22.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**</u>

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

1ನೆ ಆರೋಪಿತಳು 2015 ರಿಂದ 2023 ರವರೆಗೆ ಮೊಳಕಾಲು ನೋವಿನಿಂದ ಬಳಲುತ್ತಿದ್ದು ನಡೆಯಲು ಆಗುವುದಿಲ್ಲ ಎಂದರೆ ಸರಿಯಲ್ಲ. 2022 ರಲ್ಲಿ 1ನೆ ಆರೋಪಿತಳು ಮೊಳಕಾಲು ಆಪರೇಶನ ಮಾಡಿಕೊಂಡಿರುತ್ತಾಳೆ ಎಂದರೆ ಸರಿಯಲ್ಲ. 2022 ರಿಂದ ಇಲ್ಲಿಯವರೆಗೆ 1ನೆ ಆರೋಪಿತಳು ಮೊಳಕಾಲಿಗೆ ಸಂಬಂಧಿಸಿದ ಫಿಜಿಯೋ ಥೆರಪಿ ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ಸಾಕ್ಷಿ ಈಗ ಪಡೆದಿರಬಹುದು. 1ನೆ ಆರೋಪಿತಳು ಆಗಾಗ ಚಿಕಿತ್ಸೆ ಪಡೆಯುತ್ತಾ ಬಂದಿರುತ್ತಾಳೆ ಆಕೆಗೆ ನಡೆದಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ.

ಹೊಲದ ವಿಚಾರವಾಗಿ 1ನೆ ಆರೋಪಿತಳು ಹೊಲದ ವಿಚಾರವಾಗಿ ಜಮೀನಿನ ವಿಚಾರವಾಗಿ ನಮ್ಮ ವಿರುದ್ಧ ಇದೆ ನ್ಯಾಯಾಲಯದಲ್ಲಿ ದಾವೆ ನಂ.123/2021 ಸಲ್ಲಿಸಿರುತ್ತಾರೆ ಎಂದರೆ ಸರಿ. ನನ್ನ ಹಾಗೂ ನನ್ನ ಗಂಡನ ನಡುವೆ ಜೀವನಾಂಶದ ಪ್ರಕರಣವಿದೆ ಎಂದರೆ ಸರಿ. ನನ್ನ ಹಾಗೂ ನನ್ನ ಗಂಡನ ನಡುವೆ ಸಂಬಂಧ ಸರಿ ಇಲ್ಲ ಎಂದರೆ ಸರಿ. 1ನೆ ಆರೋಪಿತಳ ಗಂಡ ಹಾಗೂ ನನ್ನ ಹಾಗೂ ನನ್ನ ಗಂಡನ ನಡುವೆ ಸಂಬಂಧ ಸರಿ ಇಲ್ಲ ಎಂದರೆ ಸರಿ.

ನಾನು ದೂರನ್ನು 20ನೆ ತಾರೀಖಿನಂದು ನೀಡಿದ್ದು ಜಗಳವು 16ನೆ ತಾರೀಖಿನಂದು ಆಗಿರುತ್ತದೆ. 16ನೆ ತಾರೀಖಿನಂದು ಜಗಳವಾಗಿದ್ದು 20ನೆ ತಾರೀಖು ದೂರು ದಾಖಲಿಸಿದ್ದು ದೂರಿನಲ್ಲಿ ವಿಳಂಬದ ಕಾರಣ ನಮೂದಿಸಿಲ್ಲ ಎಂದರೆ ಸಾಕ್ಷಿ ನಾನು 03 ದಿನಗಳ ಕಾಲ ನಾನು ಠಾಣೆಗೆ ಹೋಗಿ ಬಂದಿರುತ್ತೇನೆ. ಗುನ್ಹೆ ಜಾಗದ ಚೆಕಬಂದಿ ನನಗೆ ಗೊತ್ತಿಲ್ಲ. ಪಂಚನಾಮೆಯಲ್ಲಿ ಬರೆದ ಚೆಕಬಂದಿ ನನಗೆ ಗೊತ್ತಿಲ್ಲ.

ಈ ಪ್ರಕರಣ ದಾಖಲಾಗುವ ಮುಂಚೆ ಸಿವಿಲ್ ದಾವೆ ಚಾಲ್ತಿಯಲ್ಲಿತ್ತು ಎಂದರೆ ಸರಿ.

1ನೆ ಆರೋಪಿತಳಿಗೆ ನಡೆದಾಡಲು ಬರದ ಕಾರಣ ಜಗಳವಾದ ಸ್ಥಳದಲ್ಲಿ ಬಂದಿಲ್ಲ ಮತ್ತು ಜಗಳವಾಗಿಲ್ಲ ಮತ್ತು ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. 2ನೆ ಆರೋಪಿ ನನಗೆ ಅವಾಚ್ಯ ಶಬ್ದಗಳಿಂದ ಬೈದು ಅವರ ಮಾನಕ್ಕೆ ಕುಂದು ತಂದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಿವಿಲ್ ದಾವೆಯನ್ನು ಹಿಂಪಡೆಸಬೇಕೆಂದು ನಾನು ಆರೋಪಿತರ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ